ಬಡಕ್ಕೆಂದು ಎದ್ದು ನಿಲ್ಲಲು ಪ್ರಯತ್ನಿಸಿ, ಕೊನೆಗೆ ನಿಲ್ಲಲಾಗದೇ ಎಡವಿದ. ಮತ್ತೆ ನಿಂತು, 'ನಮಸ್ಕಾರ ನಾಯ್ಕರಿಗೆ' ಎಂದು ಕೈಮುಗಿದ. ಆ ಬೆಳಗ್ಗೆ ಅವನು ಅಷ್ಟೇನೂ ಕುಡಿಯದೇ ಇದ್ದದ್ದರಿಂದ ಮಾತು ತೊದಲುತ್ತಿರಲಿಲ್ಲ. ಆದರೂ ಆವತ್ತು ಚಳಿಗಾಲದ ನಕ್ಷತ್ರದಂತೆ ಮಿಂಚುತ್ತಿದ್ದವನು ಇವನೇಯಾ ಅನ್ನುವಷ್ಟು ಅವನ ಮುಖ ವಿವರ್ಣಗೊಂಡಿತ್ತು. ಆ ಮುಖದಲ್ಲಿ ಜೀವನೋತ್ಸಾಹವೇ ಕಾಣದೇ ಅಣ್ಣಪ್ಪ ನಾಯ್ಕರು ಬೇಸರಗೊಂಡರು.

'ನೋಡು ನಿನ್ನ ಕಥೆ ಎಲ್ಲವೂ ನಂಗೆ ಗೊತ್ತಾಯ್ತು. ಎಲ್ಲದ್ದಕ್ಕೂ ನೀನೇ ಕಾರಣ ಎಂದು ನಿನ್ನನ್ನು ತೆಗಳಲು ಬಂದಿಲ್ಲ ನಾನು. ಆದ್ರೆ ಹಿರಿಯನಾಗಿ ಒಂದೆರಡು ಸಲಹೆ ಹೇಳದೇ ಇದ್ರೆ ಅದು ನನ್ನ ತಪ್ಪೇ ಅನ್ನಿಸ್ತು'.

'ನೋಡು ಗಿರಿಧರ, ತಾನು ಏನ್ ಮಾಡಿದ್ರೂ ನಡಿತದೇ ಎನ್ನುವ ಮರ್ಜಿ ಇದೆಯಲ್ಲ, ಅದು ಕೊನೆಗೆ ನಮ್ಮನ್ನೇ ಸಾಯಿಸ್ತದೆ. ಎಲ್ಲವೂ ನಾನು ಮಾಡಿದ್ದೇ ಅಂತಿಮ ಅಂತ ಕೂತ್ರೆ, ಬದುಕು ಒಂದಿನ ತನಗೆ ಬೇಕಾದದ್ದು ಮಾಡ್ತದೆ, ಆಗ ಎಲ್ಲವೂ ನಂದೇ ಎಂದು ಕೂತವರು ದಿಕ್ಕಾಪಾಲಾಗುತ್ತಾರೆ. ಮುಳುಗಿಸಿ, ತೇಲಿಸಿ, ಎತ್ತಿ, ಹಿಂಡಿ, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ನೂಕಿ, ನಮ್ಮನ್ನು ಹೀರಿಕೊಳ್ಳುವ ರಾಕ್ಷಸ ಅಲೆಗಳ ಹಾಗೆ ಈ ಬದುಕೂ ಕೂಡ, ಅದಕ್ಕೆ ಯಾವಾಗ, ಎಲ್ಲಿ, ಹೇಗೆ, ಏಕೆ, ಏನು ಮಾಡ್ಬೇಕು ಅನ್ನುವುದು ಚೆನ್ನಾಗಿ ಗೊತ್ತು. ನೀನು ಬೆಳೆಯುವವನು, ಬೆಳೆಯುವವನ ದಾರಿ ಸರಾಗವಾಗಬಾರದು. ಆಗಾಗ ಮುಳ್ಳು ಚುಚ್ತಾ ಇರ್ಬೇಕು, ದೊಡ್ಡ ದೊಡ್ಡ ಕಲ್ಲು ಸಿಕ್ಕಿ ಕಾಲಿಗೆ ಗಾಯ ಮಾಡ್ಬೇಕು, ಭೀಕರ ಬಿಸಿಲಿಗೆ ಬೆಂಡಿ ಬೆವರಿ ಅಲ್ಲೇ ಕೂರಿಸ್ಬೇಕು. ಹಾಗೆ ಬಳಲಿ ಕೂತವರನ್ನು ತಣ್ಣಗೇ ಗಾಳಿ ಹಾಕಿ ಮತ್ತೆ ಮುನ್ನಡೆಸ್ಬೇಕು ದಾರಿ. ಹೀಗಿದ್ದರಷ್ಟೇ ಬದುಕಿನ ಎಲ್ಲಾ ಕಷ್ಟಕೋಟಲೆಗಳು ಗೊತ್ತಾಗ್ತದೆ. ನಿನ್ನ ಕಲೆಯ ಹಾದಿಯಲ್ಲೊಂದು ಇಂತದ್ದೇ ಮುಳ್ಳು, ಇಂತದ್ದೇ ಕಲ್ಲು ಸಿಕ್ಕಿದೆ. ಕಾಲಿಗೆ ಸಿಕ್ಕಿದ ಮುಳ್ಳು ತೆಗೆದು, ಕಲ್ಲನ್ನು ಪಕ್ಕಕ್ಕೆ ಎಸೆದು ನೀನು ಮುಂದೆ ನಡೆದ್ರೆ ಸೈ, ಇಲ್ಲಾಂದ್ರೆ ಕೂತಲ್ಲೇ ಹೀಗೆ ಕೂತಿರ್ತಿಯಾ ಅಷ್ಟೇ' ಎಂದು ಕೊಂಚ ಖಾರವಾಗಿಯೂ, ಮೃದುವಾಗಿಯೂ ಹೇಳಿದರು.

ಗೋಡೆಗೊರಗಿ ನಿಂತಿದ್ದ ಗಿರಿಧರ, ಇವನ್ನೆಲ್ಲಾ ದೈನ್ಯವಾಗಿ ಕೇಳಿಸಿಕೊಳ್ಳುತ್ತಿದ್ದ. ಅವನ ಕಣ್ಣೊಳಗೆ ಒಂದು ಮಿನುಗು ಸಣ್ಣಗೇ ಹುಟ್ಟಿಕೊಳ್ಳುತ್ತಿದ್ದಂತೆ ನಾಯ್ಕರಿಗೆ ಭಾಸವಾಗುತ್ತಿತ್ತು.

'ನೋಡು ನಿನ್ನ ಮೊದಲು ನೋಡ್ದಾಗ, ಬರೀ ನಿನ್ನ ರಾಗಕ್ಕಷ್ಟೇ ಮನಸೋತವನಲ್ಲ ನಾನು, ನಿನ್ನ ಕಣ್ಣಲ್ಲೊಂದು ತುಂಬು ಭರವಸೆ ಇತ್ತು, ನಿಷ್ಕಲ್ಮಶತೆ ಇತ್ತು. ಅದನ್ನು ಹಾಗೆ ಕಾಪಾಡಿಕೊಳ್ತಿ ಅನ್ನೋ ನಂಬಿಕೆ ನಂಗಿತ್ತು. ಅಹಂ, ದೊಡ್ಡಸ್ತಿಕೆ, ಹೊಗಳಿಕೆ, ಅತಿಯಾದ ಚಟ ಇವೆಲ್ಲ ನಿನ್ನನ್ನು ಸೋಕಿದರೂ ಅವನ್ನು ಮೀರಿ ಹೋಗ್ತಿ ಅಂತೆಲ್ಲಾ ಅನ್ನಿಸ್ತಾ ಇತ್ತು. ಆದ್ರೆ ಆದದ್ದೇ ಬೇರೆ ನೋಡು.'

'ನೋಡು ಗಿರಿಧರ ನೀನು ಹೀಗೆ ಕೊಳಿಯುತ್ತ ಕೂರೋದಕ್ಕೆ ಹುಟ್ಟಿದವನಲ್ಲ, ನಿಂಗಿನ್ನೂ ಶಕ್ತಿ, ಆಯಸ್ಸು ಎಲ್ಲವೂ ಉಂಟು. ಹಳೆಯದ್ದು ಅನುಭವ ಅಂತ ಅವನ್ನೆಲ್ಲಾ ಮತ್ತೆ ಮಾಡದೇ ಕಲೆಯನ್ನು ನಿನ್ನತನವನ್ನು ತೋರಿಸು, ನಿನ್ನ ವ್ಯಕ್ತಿತ್ವ ಬೇರೆ ಅಲ್ಲ, ನಿನ್ನೊಳಗಿನ ಕಲೆ ಬೇರೆ ಅಲ್ಲ ಎರಡನ್ನೂ ಗಟ್ಟಿಯಾಗಿ ಕಾಪಾಡಿಕೊಂಡೇ ಮುಂದಕ್ಕೆ ಹೋಗ್ಬೇಕಷ್ಟೇ, ಆವತ್ತೇ ಹೇಳಿದ್ದೆ ನಿಂಗೆ. ನದಿಯಂತೆ ಬದುಕು ಹರಿತಾ ಇರ್ಬೇಕು, ಏನೂ ಬಂದರೂ ಗಟ್ಟಿಯಾಗಿ ತನ್ನೊಳಗೆ ಸ್ವೀಕರಿಸಿದ ನದಿ ಹರಿಯೋದನ್ನು ನಿಲ್ಲಿಸಲ್ಲ. ನಿನ್ನ ರಾಗವೂ ಹಾಗಾಗಬೇಕು ಅಂತ. ಅದನ್ನು ಯಾವತ್ತೂ ಮರೀಬೇಡ' ಎಂದರು.

ಗಿರಿಧರನ ಎದೆಯ ತಂತಿ ಮೀಟಿದಂತಾಗಿ ಕಣ್ಣ ಬಿರುಬಿಸಿಲಿನಲ್ಲಿ ಹನಿಯ ಮಳೆ ಸಣ್ಣಗೆ ಜಿನುಗಿತು. ಅಸಹಾಯಕತೆ, ತಪ್ಪಿತಸ್ಥ ಭಾವ, ಎಲ್ಲವೂ ಆ ಕಣ್ಣೀರಲ್ಲಿತ್ತು. ಅಳುತ್ತಾ ಕೈಮುಗಿಯುತ್ತಲೇ ಅಣ್ಣಪ್ಪ ನಾಯ್ಕರನ್ನು ದೈನ್ಯದಿಂದ ತಪ್ಪಾಯ್ತು ಅನ್ನುವಂತೆ ನಿಂತ. ಆ ದೈನ್ಯತೆಯ ಬಿಸಿಗೆ ನಾಯ್ಕರೂ ಒಂದು ಕ್ಷಣ ಕರಗಿಹೋದರೂ ಅದನ್ನು ತೋರಿಸಿಕೊಳ್ಳದಂತೆ, 'ನೋಡು ಗಿರಿಧರ, ಮುಂದಿನ ವಾರ ನಮ್ಮ ಬೈಲ್ ಗದ್ದೆಯಲ್ಲಿ ಹಾಲೂರು ಮೇಳದ ಆಟ ಉಂಟು. ಅತಿಥಿ ಭಾಗವತನಾಗಿ ನೀನು ಎರಡು ಮೂರು ಪದ್ಯ ಹಾಡ್ಬೇಕು. ಆ ದಿನ ನಿಂಗೊಂದು ಹೊಸ ಜನ್ಮ ಸಿಕ್ಕಿತೆಂಬಂತೆ ಹಾಡ್ಬೇಕು, ಇದು ನಾ ನಿಂಗೆ ಕೊಡುವ ಕೊನೆ ಅವಕಾಶ. ಹಾಡಿ ಎಲ್ಲವನ್ನೂ ನೀ ಮೀರಿದರೆ, ಖಂಡಿತ ನಾ ಇರುವವರೆಗೂ ನಿಂಗೆ ಸಹಕಾರ ಕೊಟ್ಟೇ